ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಕೆ.ಆರ್.ನಗರ

**ಸಿ.ಸಿ. ನಂ.2/2015**

| | |
|---|---|
| ಸಾಕ್ಷಿಯ ಹೆಸರು | ಶಿವ |
| ತಂದೆ / ಗಂಡ ಹೆಸರು | ವೆಂಕಟರಾಮಯ್ಯ |
| ವಯಸ್ಸು | 45 |
| ಉದ್ಯೋಗ | ಕೂಲಿ |
| ವಾಸ ಸ್ಥಳ | ಅಂಕನಹಳ್ಳಿ |

ಪ್ರಾಸಾ 1
ಚಾಸಾ 1

ಸಾಕ್ಷಿಗ ಪ್ರಮಾಣ ವಚನ ಬೋಧಿಸಲಾಯಿತು.

ದಿನಾಂಕ : 06-02-2018.

ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದಃ-

ನನಗೆ ಚಾಸಾ-2 ರಿಂದ 4 ಗೊತ್ತು. ಚಾಸಾ-2 ನನ್ನ ಹೆಂಡತಿ, ಚಾಸಾ-3 ನನ್ನ ಅತ್ತಿಗೆ, ಚಾಸಾ-4 ನನ್ನ ತಂಗಿ. ಆರೋಪಿತರೆಲ್ಲರೂ ನಮ್ಮೂರಿನವರು, ಅವರ ಪರಿಚಯ ನನಗೆ ಇದೆ. 3 ವರುಷದ ಹಿಂದೆ ನಮ್ಮೂರಿನ ಬೀದಿಯಲ್ಲಿ ಬೆಳಿಗ್ಗೆ 8 ಗಂಟೆಗೆ ನಮ್ಮ ಮನೆಯ ಮುಂದೆ ಕಂಟ್ರ್ಯಾಕಟ್ ದಾರರು ಡ್ರೈನೇಜ್ ಮಾಡಿಸುತ್ತಿದ್ದರು. ಆಗ ಮನೆಯಲ್ಲಿ ನಾನು ಮತ್ತು ಕುಟುಂಬದವರು ಇದ್ದೆವು. ಆಗ ಪಲ್ಲವಿ ಅವಾಚ್ಯ ಶಬ್ಧಗಳಿಂದ ನಮ್ಮನ್ನು ಬೈದು, ನನ್ನ ಮಗಳಿಗೆ ಹೊಡೆಯಲು ಬಂದಿರುತ್ತಾರೆ. ದಿನಾಂಕ 20-10-2014 ರಂದು ಬೆಳಿಗ್ಗೆ 7 ಗಂಟೆಗೆ ನಮ್ಮ ಮನೆಯ ಹತ್ತಿರ ನಾನು, ನನ್ನ ತಂಗಿ, ನನ್ನ ಹೆಂಡತಿ ಕುಂಬಳಕಾಯಿ ನಮ್ಮ ಗಿಡದಲ್ಲಿ ಕಿತ್ತುಕೊಂಡು ಹೋಗಿರುತ್ತಾರೆ ಎಂದು ಮಾತಾನಾಡುತ್ತಿದ್ದೆವು, ಆಗ ಸತ್ಯ, ಪಲ್ಲವಿ, ಶಾಂತ, ಆಶಾರವರೆಲ್ಲರೂ ಅಲ್ಲಿ ಇದ್ದರು. ಪಲ್ಲವಿ ನಮ್ಮನ್ನು ಅವಾಚ್ಯ ಶಬ್ಧಗಳಿಂದ ಬೈದು, ನನ್ನ ಅತ್ತಿಗೆ ರುಕ್ಮಿಣಿಗೆ ಹೊಡೆದಿರುತ್ತಾರೆ, ಅವರು ಕೆಳಗೆ ಬಿದ್ದಿರುತ್ತಾರೆ. ರಂಗಸ್ವಾಮಿ, ಜಯಮ್ಮ, ಪುನೀತ್, ಮಣಿಲಾ, ಸಣ್ಣಯ್ಯ, ಜಾನಕಮ್ಮ ಇವರೆಲ್ಲರೂ ಗುಂಪು ಕಟ್ಟಿ ನಮ್ಮನ್ನು ಹೊಡೆದು, ನಮ್ಮ ಮನೆಯೊಳಗಡೆ ನುಗ್ಗಿ ಕೊಲೆ ಬೆದರಿಕೆ ಹಾಕಿರುತ್ತಾರೆ. ಈ ಹಿಂದೆ ನಮಗೂ, ಆರೋಪಿತರಿಗೂ ಡ್ರೈನೇಜ್ ಸಲುವಾಗಿ ಗಲಾಟೆಯಾಗಿತ್ತು, ಅದರ ಸಲುವಾಗಿ ಆರೋಪಿತರು ನಮ್ಮ ವಿರುದ್ಧ ಗಲಾಟೆ ಮಾಡಿರುತ್ತಾರೆ. ಶೋಭ, ಗೀತಾ ಬಂದು ಜಗಳ ಬಿಡಿಸಿರುತ್ತಾರೆ. ಘಟನೆ ಬಗ್ಗೆ ಪೋಲಿಸರಿಗೆ ನಾನು ದೂರು ನೀಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು

ಗುರುತಿಸಲಾಯಿತು. ದೂರು ಕೊಟ್ಟ ಮೇಲೆ ಪೋಲಿಸರು ನಮ್ಮ ಮನೆಯ ಹತ್ತಿರ ಬಂದಿರುತ್ತಾರೆ. ಪೋಲಿಸರಿಗೆ ಸ್ಥಳವನ್ನು ಶೋಭ ತೋರಿಸಿರುತ್ತಾರೆ. ಮಹಜರ್ ಸಮಯದಲ್ಲಿ ನಾನು ಇರಲಿಲ್ಲ. ಮಹಜರ್ ನ್ನು ಸಾಕ್ಷಿಗೆ ತೋರಿಸಿ, ಸಾಕ್ಷಿಯ ಸಹಿಯನ್ನು ಪೋಲಿಸ್ ಠಾಣೆಯಲ್ಲಿ ಹಾಕಿಸಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಮಹಜರ್ ನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಮಹಜರ್ ನಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಮಹಜರ್ ಗೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿ ಗುರುತಿಸಿರುತ್ತಾರೆ.

ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಪಿಪಿರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.

ಪಾಟೀ ಸವಾಲುಃ ಮಾನ್ಯ ಎಪಿಪಿರವರಿಂದಃ-

ದಿನಾಂಕ 21-10-2014 ರಂದು ಪೋಲಿಸರು ಘಟನಾ ಸ್ಥಳಕ್ಕೆ ಬಂದಿದ್ದರು ಎಂದರೆ ನಿಜ. ಕೃತ್ಯ ಸ್ಥಳವನ್ನು ಪೋಲಿಸರಿಗೆ ನಾನೇ ಘಟನಾ ಸ್ಥಳವನ್ನು ತೋರಿಸಿ, ಪೋಲಿಸರು ಪಂಚನಾಮೆ ಬರೆದುಕೊಂಡ ಮೇಲೆ ಓದಿ ಹೇಳಿ ಮೇಲೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಸಹಿ ಮಾಡಿದ್ದರು, ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ವಕೀಲರು ಗೈರು ಹಾಜರು, ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ-ಇಲ್ಲಾ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

(ಶ್ರೀನಾಥ್.ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.